ಕೊನೆಗೂ ಆಂಡ್ರಾಯಿಡ್ ಮತ್ತು ಐ ಫೋನ್‌ಗಳೆರಡಕ್ಕೂ ಹೊಂದುವ ಆಪ್ಲಿಕೇಶನ್ ಸಿಕ್ಕಿಯೇ ಬಿಟ್ಟಿತು. ಹಾಗೂ ಆ ಸುದಿನ ಬಂದೇ ಬಂತು. ಎಲ್ಲ ಸ್ವಚ್ಛಗೊಳಿಸಿ,

ಸ್ನಾನ ಮಾಡಿ ಶುಚಿರ್ಭೂತರಾಗಿ ಸುನಿಲ್, ದೀಪಾ ಕೆಳಗಿಳಿದು ಬಂದರು. ಹೂ, ಅಗರಬತ್ತಿ, ರಂಗೋಲಿಗಳಿಂದ ಶೋಭಿಸುತ್ತಾ ಪಾವನವಾಗಿತ್ತು, ಆ ಕೋಣೆ. ಮೂರ್ತಿಯಲ್ಲಿ ಗಣೇಶನನ್ನು ಆವಾಹಿಸುವುದರೊಂದಿಗೆ ಪೂಜೆ ಆರಂಭವಾಯ್ತು. ಸತ್, ಚಿತ್, ಆನಂದದ ಅನುಭೂತಿಯಲ್ಲಿ ತೇಲುತ್ತಾ ಆ ಮಂತ್ರಗಳು ನೀಡುವ ದಿವ್ಯಾನುಭೂತಿ ಇದೇ ಇರಬೇಕು, ಎಂದಂದುಕೊಂಡ, ಸುನಿಲ್. ಎಲ್ಲ ಸಂಕಟಗಳನ್ನೂ ಪರಿಹರಿಸಿ ಕೊಳ್ಳಲು ತಕ್ಕ ಚಿತ್ತಸ್ಥೈರ್ಯವನ್ನು ಕರುಣಿಸುವಂತೆ ವಿಘ್ನವಿನಾಶಕನಲ್ಲಿ ನಿಜಭಕ್ತಿಯಿಂದ ಬೇಡಿಕೊಂಡ. ಅವನನ್ನು ಗಮನಿಸಿದ ದೀಪಾಳ ಹುಬ್ಬು, ಏನೆಂದು ಕೇಳುವಂತೆ ಮೇಲೇರಿತು. ಅವಳನ್ನು ನೋಡಿ ನಿರ್ಮಲ ನಗು ನಕ್ಕ ಸುನಿಲ್. ಅದರರ್ಥ ಏನೂ ಇರಬಹುದಿತ್ತು. 'ಎಲ್ಲ ಅರ್ಥವಾಯ್ತು, ಚಿನ್ನಾ,' ಎಂದೋ, 'ನನಗೆ ಇದ್ದಕ್ಕಿದ್ದಂತೆ ಹಸಿವಾಗಿದೆ; ಬೆಳಿಗ್ಗೆ ಉಪಾಹಾರ ತಿಂದಿಲ್ಲ,' ಎಂದೋ, 'ಈ ವಾಯುಬಾಧೆ ತೊಂದರೆ ಕೊಡುತ್ತಿದೆ,' ಎಂದೋ ಏನೂ ಇದ್ದೀತು! ಹೋಗಲಿ, ಎಂದುಕೊಂಡು ದೀಪಾಳ ಹುಬ್ಬು ಏರಿದಂತೆ ಇಳಿದಾಗ, ಸುನಿಲ್ ಕೂಡಾ ಸ್ವಸ್ಥನಾದ.

ಗಂಟೆ ಬಾರಿಸುತ್ತಾ, ಪವಿತ್ರ ಜಲ ಸಿಂಪಡಿಸುತ್ತಾ, ಅತಳ, ವಿತಳ, ಪಾತಾಳಗಳಿಂದ ಬರುವ ದೇವ ದೇವತೆಗಳಿಗಾಗಿ ದಾರಿ ತೆರವು ಮಾಡಲಾಯ್ತು. ಸತ್ಕರ್ಮ, ದಾನ, ಧರ್ಮಗಳ ಆಚರಣೆಯ ಸಂಕಲ್ಪದೊಂದಿಗೆ, ಮಂಗಳಾರತಿಯೊಂದಿಗೆ ಪೂಜೆ ಸಂಪನ್ನವಾಯ್ತು.

ಕುಟುಂಬದೊಂದಿಗೆ ಪೂಜೆ, ಪ್ರಾರ್ಥನೆ ಮುಗಿದ ಬಳಿಕ, ಸಂಜೆ ಗೆಳೆಯರು ಹಾಗೂ ನೆರೆಯವರಿಗಾಗಿ ಹಬ್ಬದೂಟ ಬಡಿಸಲಾಯ್ತು. ದೈವೀ ಸಮಾರಂಭವಾದ್ದರಿಂದ ಹಲವು ಶತಮಾನಗಳಿಂದ ಬಂದ ಹಿಂದೂ ಸಂಪ್ರದಾಯದಂತೆ ಶುದ್ಧ ಶಾಕಾಹಾರ ಭೋಜನವದು.

ಪೂಜೆಗೆ ಆಮಂತ್ರಿಸಲಿಲ್ಲವೆಂದು ಕೆಲ ಅತಿಥಿಗಳು ಅಸಮಾಧಾನಗೊಂಡಿದ್ದರು. ಸರಿಯಾದ ಕ್ರಮದ ಅರಿವಿಲ್ಲದೆ ಮಾಡಿದ ಪೂಜೆಯಲ್ಲಿ ಇತರರು ತಪ್ಪುಗಳನ್ನು ಕಂಡರೆ, ಎಂದೋ, ಇಲ್ಲಾ, ಸುದೀರ್ಘ ಪೂಜಾ ವಿಧಾನವನ್ನು ಹ್ರಸ್ವ ಗೊಳಿಸಿದ ಬಗ್ಗೆ ಟೀಕೆಗೆ ಗುರಿಯಾಗ ಬಹುದೆಂದೋ, ಏಕಾಗಿ ದೀಪಾ, ಸುನಿಲ್ ಪೂಜೆಗೆ ತಮ್ಮನ್ನು ಕರೆಯಲಿಲ್ಲವೆಂದು ಅವರು ಅರಿಯದಾಗಿದ್ದರು. ಮುಂದಿನ ವರ್ಷ ಎಲ್ಲರನ್ನೂ ಆಹ್ವಾನಿಸುವ ಭರವಸೆಯೊಂದಿಗೆ ಅವರೆಲ್ಲ ಕೆಳಗೆ ಗಣೇಶ ದರ್ಶನಕ್ಕಾಗಿ ನಡೆದರು.

ಅತಿಥಿಗಳು ಮತ್ತೂ ಸ್ವಲ್ಪ ಹೊತ್ತು ಅಲ್ಲಿ ಉಳಿದರು. ಯಾರೂ ಬರಿಕೈಯಲ್ಲಿ ಬಂದಿರಲಿಲ್ಲ. ಕೆಲವರು ಹಣ್ಣುಗಳನ್ನು ತಂದಿದ್ದರೆ, ಇನ್ನು ಕೆಲವರು ಗಣೇಶನಿಗೆ ಪ್ರಿಯವಾದ ಮೋದಕವನ್ನೂ ತಂದಿದ್ದರು. ಹೊರಡುವಾಗ, ಬರದೆ ಮನೆಯಲ್ಲುಳಿದವರಿಗಾಗಿ ಪ್ರಸಾದವನ್ನೂ ಜೊತೆಗೊಯ್ದರು. ತಮ್ಮ ಉಪಯೋಗಕ್ಕಾಗಿ ಮಿಗುವ ಆಹಾರವನ್ನು ಉಳಿಸಿಕೊಳ್ಳಬಯಸದೆ, ಕಾಪಿಟ್ಟಿದ್ದ ಮೊಸರಿನ ಡಬ್ಬಗಳಲ್ಲಿ, ಅವೂ ಮುಗಿದಾಗ ಜಿಪ್‌ಲಾಕ್ ಬ್ಯಾಗ್‌ಗಳಲ್ಲಿ ಕಟ್ಟಿ, ಹೊರಟವರ ಕೈಯಲ್ಲಿರಿಸಿದಳು, ದೀಪಾ. ಎಲ್ಲರೂ ಹೋದ ಬಳಿಕ, ಸುನಿಲ್ ಅಸಮಾಧಾನ ತೋರಿದ, "ಆ ವಡೆಗಳನ್ನಾದ್ರೂ ಸ್ವಲ್ಪ ಉಳಿಸ ಬಹುದಿತ್ತಲ್ಲ?"

"ಮತ್ತೆ ನಿನ್ನ ಹೊಟ್ಟೆ ಅವನಂತಾಗಲೆಂದೇ?" ಆಗಷ್ಟೇ ಬುದ್ಧಿ, ಸಿದ್ಧಿ ಹಾಗೂ ವಿಘ್ನನಾಶಕ್ಕಾಗಿ ತಾವು ಪ್ರಾರ್ಥಿಸಿದ ಆ ಗಣಪನತ್ತ ಕೈತೋರಿ ದೀಪಾ ಅಂದಳು.

ಅವಳ ಮಾತು ಮುಗಿದಿರಲಿಲ್ಲ. "ನಾಳೆ ವಿಸರ್ಜನೆಗೆ ಬೇಕಾದ ಮಂತ್ರ ಹಾಗೂ ಕ್ರಮಗಳ ಬಗ್ಗೆ